ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ-571313
ದೂರವಾಣಿ : ಕಛೇರಿ : 08226-226229
ಇ-ಮೇಲ್ : chncircf@gmail.com

# ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ (ಪ್ರಾದೇಶಿಕ), ಚಾಮರಾಜನಗರ

ಸಂಖ್ಯೆ: ಸಿ1/ಲ್ಯಾಂಡ್/ಎಫ್.ಸಿ.ಪ್ರಕರಣ ಸಂಖ್ಯೆ:27085/2020-21

ದಿನಾಂಕ: 25-05-2022.

ಇವರಿಗೆ,

**ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,**
(ಅರಣ್ಯ ಸಂರಕ್ಷಣೆ), ಅರಣ್ಯ ಭವನ,
ಮಲ್ಲೇಶ್ವರಂ, **ಬೆಂಗಳೂರು.**

ಮಾನ್ಯರೇ,

ವಿಷಯ: Diversion of 2.124 hectare of forest land in Chilandavadi State Forest (Village) Sy.No.1, Uyyamballi Hobli, Kanakapura Taluk, Ramanagar District & Forest Division for laying 66 KV SC line on DC towers from existing 66/11 KV Doddalahalli Sub-station to proposed 66/11 KV Hegganuru Sub-station (12.238 km distance) in favour of the Executive Engineer (Electrical), Major Works Division, Karnataka Power Transmission Corporation Ltd (KPTCL), old B.M.Road, Ramanagar-Proposal No. **FP/A/TRANS/27085/2017.**

ಉಲ್ಲೇಖ : ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಕಛೇರಿ ಪತ್ರ ಸಂಖ್ಯೆ: ಎ4/ಲ್ಯಾಂಡ್/ಎಫ್.ಸಿ/ವಿವ-8/2017-18 ದಿನಾಂಕ: 16.05.2022.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ಉಲ್ಲೇಖಿತ ಪತ್ರದಲ್ಲಿ ಈ ಕಛೇರಿಗೆ ವರದಿ ಮಾಡುತ್ತಾ, ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ 66/11 ಕೆ.ವಿ ಹೆಗ್ಗನೂರು ಉಪಕೇಂದ್ರದವರೆಗೆ ವಿದ್ಯುತ್ ಮಾರ್ಗವನ್ನು ನಿರ್ಮಿಸುವ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು Parivesh web e-portal ನಲ್ಲಿ ಕೋರಿರುವ ಅಂಶಗಳನ್ವಯ ಪರಿಶೀಲಿಸಿ ಸೂಚಿಸಿದಂತೆ ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಅರಣ್ಯ-ಸಿ) ರವರು ತಿಳಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್), ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಪ್ರಧಾನ ಕಾಮಗಾರಿ ವಿಭಾಗ, ರಾಮನಗರ ರವರು ಕೇಂದ್ರ ಸರ್ಕಾರವು Parivesh web e-portal ನಲ್ಲಿ ಕೋರಿರುವ ನಾಲ್ಕು ಅಂಶಗಳಿಗೆ ಮಾಹಿತಿಯನ್ನು ಒದಗಿಸಿರುವುದರಿಂದ, ಸದರಿ ಮಾಹಿತಿಯನ್ನು ಅಡಕಗೊಳಿಸಿ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಸಲ್ಲಿಸಿರುವುದಾಗಿ ಹಾಗೂ ಮೇಲಿನ ಪ್ರಸ್ತಾವನೆಗೆ ಸಂಬಂಧಪಟ್ಟಂತೆ ಸರ್ಕಾರದಿಂದ ಕೇಳಲಾದ ಅಂಶಗಳಿಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು ಸಲ್ಲಿಸಿದ ಮೇರೆ, ಸ್ಥಳ ಪರಿಶೀಲನಾ ವರದಿ (Site Inspection

Report) ಮತ್ತು ಶಿಫಾರಸ್ಸು ವರದಿ (Recommendation Letter) ಗಳೊಂದಿಗೆ ಈ ಪ್ರಕರಣದ ವನ್ಯಜೀವಿ ಪ್ರಸ್ತಾವನೆಯನ್ನು ಈಗಾಗಲೇ ಸಲ್ಲಿಸಿದ್ದು, ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಪ್ರಸ್ತಾವನೆಯನ್ನು ಈ ಕಛೇರಿ ವತಿಯಿಂದ ಸಲ್ಲಿಸುವಂತೆ ಉಲ್ಲೇಖ ಪತ್ರದಲ್ಲಿ ಕೋರಿರುತ್ತಾರೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರು ಸಲ್ಲಿಸಿರುವ ಮೇಲ್ಕಂಡ ದಾಖಲಾತಿಗಳ ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಹಾಗೂ Parivesh web e-portal ನಲ್ಲಿಯೂ ಸಹ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಗೌರವಗಳೊಂದಿಗೆ,

ತಮ್ಮ ನಂಬುಗೆಯ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಪ್ರಾದೇಶಿಕ), ಚಾಮರಾಜನಗರ.

O/C

✓ ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.

ದಿನಾಂಕ 26/05/2022 ರಂದು ರವಾನಿಸಲಾಗಿದೆ
ವಿ.ನಿ.